# ದಾಖಲಾತಿಗೆ ಸೂಚನೆಗಳು/Instructions for Admission

ದಿನಾಂಕ 29.5.2026 ರಿಂದ ಅಗತ್ಯ ದಾಖಲಾತಿಗಳೊಂದಿಗೆ ತಂದೆ/ತಾಯಿ ಅಥವಾ ಪೋಷಕರು ವಿದ್ಯಾರ್ಥಿಯ ಜೊತೆಗೆ ಬಂದು ಶಾಲೆ ಹಾಗೂ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಮಾಡಿಸಬಹುದು.

- **ದಿನಾಂಕ 29.5.2026 ಶುಕ್ರವಾರದಿಂದ ತರಗತಿಗಳು ಪ್ರಾರಂಭವಾಗುತ್ತವೆ.**
- **ದಿನಾಂಕ 6.6.2026 ಶನಿವಾರದಂದು ದಾಖಲಾತಿಗೆ ಕೊನೆಯ ದಿನವಾಗಿರುತ್ತದೆ.**

## ಶಾಲಾ ದಾಖಲಾತಿಗೆ ಸಂಬಂಧಿಸಿದ ವಿವರ

- APAAR, PEN (Permanent Education Number) & SATS Number ಒದಗಿಸಬೇಕು.
- ಆನ್‌ಲೈನ್ ವರ್ಗಾವಣೆ ಪತ್ರವನ್ನು (SATS ಟಿ.ಸಿ) ವಿದ್ಯಾರ್ಥಿಯು ದಾಖಲಾದ 15 ದಿನಗಳ ಒಳಗೆ ಟಿ.ಸಿ.ಯನ್ನು ಶಾಲೆಗೆ ತಲುಪಿಸುವ ಜವಾಬ್ದಾರಿ ಪೋಷಕರದ್ದೇ ಆಗಿರುತ್ತದೆ.
- ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮೂಲ ದಾಖಲೆಗಳು ಹಾಗೂ ಜೆರಾಕ್ಸ್ ಪ್ರತಿಗಳು.
- ಜನನ ಪ್ರಮಾಣ ಪತ್ರ (ಹಿರಿಯ ಪ್ರಾಥಮಿಕ ಶಾಲೆಗೆ ಮಾತ್ರ)
- **ಬ್ಯಾಂಕ್‌ಖಾತೆ ಪ್ರತಿ:** ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆರೆದಿರುವ ವಿದ್ಯಾರ್ಥಿ ಖಾತೆಯ ಮೊದಲನೆಯ ಪುಟದ ಜೆರಾಕ್ಸ್ ಪ್ರತಿ ಒದಗಿಸಬೇಕು.
- ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ 5 ಫೋಟೋಗಳು.
- ವಿದ್ಯಾರ್ಥಿ, ತಂದೆ, ತಾಯಿ ಅಥವಾ ಪೋಷಕರ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ
- ಒಂದು ಕುಟುಂಬದಿಂದ ಒಬ್ಬ ವಿದ್ಯಾರ್ಥಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿರುತ್ತದೆ.

## ವಿದ್ಯಾರ್ಥಿನಿಲಯಕ್ಕೆ ಒದಗಿಸಬೇಕಾದ ದಾಖಲೆಗಳು ಹಾಗೂ ತರಬೇಕಾದ ವಸ್ತುಗಳು

- ವಿದ್ಯಾರ್ಥಿಯ ವೈದ್ಯಕೀಯ ಪ್ರಮಾಣಪತ್ರ
- ಜಾತಿ ಮತ್ತು ಆದಾಯ ಪ್ರಮಾಣಪತ್ರ (ಜೆರಾಕ್ಸ್ ಪ್ರತಿ)
- ರೇಷನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್ (ಜೆರಾಕ್ಸ್ ಪ್ರತಿ)
- ತಂದೆ, ತಾಯಿ ಮರಣ ಹೊಂದಿದ್ದಲ್ಲಿ ಮರಣ ಪ್ರಮಾಣ ಪತ್ರ (ಜೆರಾಕ್ಸ್ ಪ್ರತಿ)
- ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ 10 ಫೋಟೋಗಳು
- ತಟ್ಟೆ, ಲೋಟ, ಚಾಪೆ/ಜಮಖಾನ, ಹೊದಿಕೆ, ದಿನನಿತ್ಯದ ಉಡುಪುಗಳು, ಟ್ರಂಕ್, ಬಕೆಟ್, ಮಗ್, ಸೋಪು, ಬಾಚಣಿಗೆ, ಟವೆಲ್ ಇತ್ಯಾದಿ ಅಗತ್ಯ ವಸ್ತುಗಳು

# ವಿದ್ಯಾರ್ಥಿಯ ಶೈಕ್ಷಣಿಕ ಮಾಹಿತಿ ನಮೂನೆ

| | | | |
|---|---|---|---|
| 1 | ವಿದ್ಯಾರ್ಥಿಯ ಹೆಸರು | : | |
| 2 | ವಿದ್ಯಾರ್ಥಿಯ ಹುಟ್ಟಿದ ದಿನಾಂಕ | : | D D M M Y Y Y Y |
| 3 | ವಿದ್ಯಾರ್ಥಿಯ ಆಧಾರ್ ಸಂಖ್ಯೆ | : | |
| 4 | ವಿದ್ಯಾರ್ಥಿಯ ಎಸ್ಎಟಿಎಸ್ (SATS) ಸಂಖ್ಯೆ | : | |
| 5 | ಯುಡೈಸ್+ ಪೆನ್ (PEN) ನಂಬರ್ | : | |
| 6 | ಯುಡೈಸ್+ ಅಪಾರ್ (APAAR) ಐಡಿ | : | |
| 7 | ಶಾಲೆಯ ಡೈಸ್‌ಕೋಡ್ (DISE Code) | : | |
| 8 | ಶಾಲೆಯ ಮುಖ್ಯೋಪಾಧ್ಯಾಯರ ಹೆಸರು ಮತ್ತು ಮೊಬೈಲ್ ಸಂಖ್ಯೆ | : | |

ಈ ಮೇಲ್ಕಂಡ ವಿವರಗಳು ಸರಿಯಿದೆ ಎಂದು ದೃಢೀಕರಿಸಲಾಗಿದೆ.

**ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರು**

**ಮೇಲಿನ ಎಲ್ಲಾ ಮಾಹಿತಿಯನ್ನು ಕಡ್ಡಾಯವಾಗಿ ಭರ್ತಿಮಾಡಬೇಕು.**